(ಆ) ರಾಷ್ಟ್ರೀಕರಣವಾದ ಪ್ರದೇಶದಲ್ಲಿರುವ ಹಳ್ಳಿಗಳಿಗೆ ಸಂಪರ್ಕಸಾಧನವಾದ ರಸ್ತೆಗಳ ಸ್ಥಿತಿಯನ್ನು ಅನುಸರಿಸಿ, ಜನರ ಅಪೇಕ್ಷೆಯ ಮೇರೆಗೆ ಬಸ್ ಸೌಕರ್ಯ ಕಲ್ಪಿಸುವುದನ್ನು ಪರಿಶೀಲಿಸಲಾಗುವುದು.

ಅರಸೀಕೆರೆ ಚುನಾವಣೆ ಕ್ಷೇತ್ರದಲ್ಲಿ ಹಂಡೊಕ್ಕೊ ಹಾಗೂ ಜನತಾ ಯೋಜನೆಗಳ ಮೇರೆಗೆ ಕಟ್ಟಲಾದ ಮನೆಗಳು

೭೦ (೯) ಶ್ರೀ ಜಿ. ಎಸ್. ಬಸವರಾಜ್ ಅರಸೀಕೆರೆ.—ಮಾನ್ಯ ಕಾನೂನು ಸಂಸದೀಯ ವ್ಯವಹಾರ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ.—

(೧) ಅರಸೀಕೆರೆ ಕ್ಷೇತ್ರದಲ್ಲಿ ಬಡವರಿಗಾಗಿ ಜನತಾ ಮತ್ತು ಹಂಡೊಕ್ಕೋ ಯೋಜನೆಗಳಲ್ಲಿ ಕಟ್ಟಿರುವ ಮನೆಗಳ ಸಂಖ್ಯೆ ಎಷ್ಟು;

(೨) ಇವುಗಳಲ್ಲಿ ಈಗಾಗಲೇ ಶಿಥಿಲವಾಗಿರುವ ಮನೆಗಳ ಸಂಖ್ಯೆ ಎಷ್ಟು?

(೩) ಮನೆಗಳು ಬಹುಬೇಗ ಬಿದ್ದುಹೋಗಲು ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮತ್ತು ವಸತಿ ಮಂತ್ರಿಗಳು).—

(೧) ೧೯೭೩–೭೪ನೇ ಸಾಲಿನಿಂದ ೧೯೮೫–೮೬ರವರೆಗೆ ೧೭೦೨ ಮನೆಗಳ ನಿರ್ಮಾಣವಾಗಿರುತ್ತದೆ

(೨) ೧ ಮನೆ ಸಂಪೂರ್ಣವಾಗಿ ಬಿದ್ದು ಹೋಗಿದೆ ಮತ್ತು ೧೨ ಮನೆಗಳ (ಅರ್ಧಭಾಗದಷ್ಟು) ಹೆಂಚುಗಳು ಹಾರಿಹೋಗಿ ನಾಶವಾಗಿವೆ.

(೩) ಮನೆ ಬಿದ್ದು ಹೋಗಿರುವುದು ಮಳೆಯಿಂದ ಹೆಂಚುಗಳು ಹಾರಿ ಹೋಗಿರುವುದು ಬಿರುಗಾಳಿಯಿಂದ

ಶ್ರೀ ಜಿ. ಎಸ್. ಬಸವರಾಜ್.—ನಮ್ಮ ತಾಲ್ಲೂಕಿನಲ್ಲಿ ಕಟ್ಟಿಸಿರುವ ಜನತಾ ಮನೆಗಳ ಬಗ್ಗೆ ಸರ್ಕಾರದ ವತಿಯಿಂದ ತನಿಖೆ ನಡೆದಿದೆ. ಈ ತನಿಖೆಯ ವರದಿ ಸರ್ಕಾರಕ್ಕೆ ಬಂದಿದೆಯೇ ಹೇಗೆ ? ಬಂದಿದ್ದರೆ ಸರ್ಕಾರದ ಆ ವರದಿ ಮೇಲೆ ಏನು ಕ್ರಮ ಕೈಗೊಳ್ಳಬೇಕೆಂದಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಕೇಳಿರುವ ಪ್ರಶ್ನೆಗೂ ಮತ್ತು ಈಗ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೂ ಒಂದಕ್ಕೊಂದು ಸಂಬಂಧವಿಲ್ಲ. ಆದ್ದರಿಂದ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.

ಶ್ರೀ ಜಿ. ಎಸ್. ಬಸವರಾಜ್ —ಇಲ್ಲಿ ನನ್ನ (೩) ಪ್ರಶ್ನೆಗೆ ಉತ್ತರವಾಗಿ ಮನೆ ಬಿದ್ದು ಹೋಗಿರುವುದು ಮಳೆಯಿಂದ, ಹೆಂಚುಗಳು ಹಾರಿ ಹೋಗಿರುವುದು ಬಿರುಗಾಳಿಯಿಂದ ಎಂದು ಹೇಳಿದ್ದಾರೆ. ಇದರ ಬಗ್ಗೆಯೆ ಸರ್ಕಾರದ ವತಿಯಿಂದ ವಿಚಾರಣೆ ನಡೆದಿದೆ. ಆದ್ದರಿಂದ ಈ ವಿಚಾರಣಾ ವರದಿ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಕೇಳುತ್ತಿದ್ದೇನೆ.

ಶ್ರೀ ಎ ಲಕ್ಷ್ಮೀಸಾಗರ್.—ತನಿಖೆಯ ವಿಚಾರ ಈ ಪ್ರಶ್ನೆಯಲ್ಲಿ ಬರುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡುತ್ತೇನೆ.

Number of hostels run by Social Welfare Department

31. SRI GOVIND P. VADEYARAJ (Kamalapur).— will the Minister for Social Welfare be pleased to state,

a) The total number of hostels run by the Social Welfare Department for the benefit of Sch.Castes/Sch. Tribe students.

b) The amount spent on these hostels every year, figures for the last 3 years.